**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 1031: 2022</u>**

**ದಿನಾಂಕಃ 07.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ರವಿಕುಮಾರ್ | ಚಾಸಾ-2, ಪ್ರಾಸ.-2 |
| ತಂದೆಯ ಹೆಸರು ಃ | ಚಂದ್ರಪ್ಪ | |
| ವಯಸ್ಸು ಃ | 50 ವರ್ಷ | |
| ಉದ್ಯೋಗ ಃ | ಶಿಕ್ಷಕ | |
| ವಾಸ ಃ | ಕಡೂರು | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಪೋಲಿಸರು ನನಗೆ ಯಾವುದೇ ನೋಟಿಸು ನೀಡಿರುವುದಿಲ್ಲ. ನಾನು ಯಾವುದೇ ಮಹಜರ್ ಗೆ ಹೋಗಿರುವುದಿಲ್ಲ ಮತ್ತು ಪೋಲಿಸರು ನನ್ನ ಮುಂದೆ ಯಾವುದೇ ಮಹಜರ್ ಮಾಡಿರುವುದಿಲ್ಲ. ಸಾಕ್ಷಿಯು ನೋಟಿಸ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು, ಸಾಕ್ಷಿಯು ಮಹಜರ್ ನಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು, ಛಾಯಾಚಿತ್ರವನ್ನು ನಿಪಿ-4 ಗುರುತಿಸಲಾಯಿತು. ವಾಹನ ಅಮಾನತ್ ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>**

ದಿಃ 20.09.2021 ರಂದು ಜರುಗಿದ ಘಟನೆಗೆ ಸಂಬಂಧಿಸಿದಂತೆ ಪೋಲಿಸರು ಮಹಜರ್ ಗೆ ಹಾಜರಾಗುವಂತೆ ನನಗೆ ಮತ್ತು ಚಾಸಾ-3 ರವರಿಗೆ ನಿಪಿ-2 ರಂತೆ ನೋಟಿಸು ನೀಡಿ ಚಾಸಾ-4 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪೋಲಿಸರು ಮಹಜರನ್ನು ನಿಪಿ-2 ರಂತೆ 2.30 ರಿಂದ 3.30 ರವರೆಗೆ ದಿಃ 21.09.2021 ರಂದು ಜರುಗಿಸಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-4 ರಂತೆ ಛಾಯಾಚಿತ್ರ ತೆಗೆಯಲಾಯಿತು ಎಂದರೆ ಸರಿಯಲ್ಲ. ಅದೇ ದಿನ ಪೋಲಿಸರು ಚಾಸಾ-4 ರವರ ಸಮಕ್ಷಮ ನನ್ನ ಮತ್ತು ಚಾಸಾ-3 ರವರ ಹಾಜರಿಯಲ್ಲಿ ನಿಪಿ-5 ರಂತೆ ಅಪಘಾತಕ್ಕೆ ಒಳಪಟ್ಟ ಕೆಎ-35 ಎಫ್-416 ಬಸ್ಸು ಮತ್ತು ಟಿ ವಿ ಎ್ ಕೆಎ-66 ಹೆಚ್-8311 ವಶಪಡಿಸಿಕೊಂಡು ಮಹಜರನ್ನು ಮಧ್ಯಾಹ್ನ 3.45 ರಿಂದ 4.15 ರವರೆಗೆ ಠಾಣೆಯ ಆವರಣದಲ್ಲಿ ಜರುಗಿಸಿದರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.